ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೆ ಹಣಕಾಸಿನ ಸಹಾಯ ಶಾಶ್ವತವಾಗಿ ಆಗುವುದರ ಬಗ್ಗೆ.

೫೧೫. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ಶಹರ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಹಣಕಾಸಿನ ಸಹಾಯ ಶಾಶ್ವತವಾಗಿ ಆಗುವಂತೆ ಎ.ಪಿ ಎಂ.ಸಿ. ಯಲ್ಲಿಯ ಸೆಸ್ ಹಣ ವರ್ಗಾಯಿಸಲು ಸರ್ಕಾರ ಕಾನೂನು ತಿದ್ದುಪಡಿ ತಂದಿರುವುದು ನಿಜವೆ ?

ಆ) ಕೃಷಿ ವಿಶ್ವವಿದ್ಯಾಲಯಕ್ಕೆ ತಿದ್ದುಪಡಿ ತಂದ ಮೇಲೆ ಯಾವ ಯಾವ ಎ.ಪಿ.ಎಂ.ಸಿ.ಗಳು ಹಣ ನೀಡಿರುವುವು (ವಿವರವನ್ನೊದಗಿಸುವುದು) ?

ಇ) ಕೃಷಿ ವಿಶ್ವವಿದ್ಯಾಲಯಗಳಿಗೆ ಇನ್ನೂ ಶಾಶ್ವತವಾಗಿ ಬರುವಂತೆ ಸರ್ಕಾರದವರು ಕೈಗೊಂಡ ಯೋಜನೆಗಳಾವುವು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ಹೌದು.

ಆ) ಎ.ಪಿ.ಎಂ.ಸಿ. ತಿದ್ದುಪಡಿಯಾದ ಮೇಲೆ ಇದುವರೆವಿಗೂ ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಇನ್ನೂ ಯಾವ ಎ.ಪಿ.ಎಂ.ಸಿ.ಯವರೂ ಹಣ ಸಂದಾಯ ಮಾಡಿರುವುದಿಲ್ಲ.

ಇ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅಭಿವೃದ್ಧಿ ಅನುದಾನವನ್ನು ಕೊಡಲು ಪ್ರಯತ್ನಿಸಲಾಗುತ್ತಿದೆ.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಅವಶ್ಯಕತೆಗೆ ಭೂಮಿಯನ್ನು ವಶಪಡಿಸಿಕೊಳ್ಳುವ ಬಗ್ಗೆ

೫೧೪. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ಶಹರ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಅವಶ್ಯಕತೆಗೆ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯ ಯಾವ ಹಂತದಲ್ಲಿ ಇದೆ, ಮತ್ತು ಎಷ್ಟು ಎಕರೆ ಪಡೆಯಬೇಕಾಗಿದೆ ?

ಆ) ಕೃಷಿ ವಿಶ್ವವಿದ್ಯಾಲಯದ ಮುಖ್ಯ ಕಟ್ಟಡದ ವಿನ್ಯಾಸ ಪೂರ್ಣ ಪರಿಷ್ಕೃತವಾಗಿದೆಯೇ ಮತ್ತು ಬೇಕಾಗಿರುವ ಕಟ್ಟಡಗಳ ನಕ್ಷೆಯ ಪ್ರಕಾರ ಹಣದ ಅಂದಾಜು ಬೇಡಿಕೆ ಎಷ್ಟು ?

ಇ) ಕೃಷಿ ವಿಶ್ವವಿದ್ಯಾಲಯಕ್ಕೆ ವಶಪಡಿಸಿಕೊಳ್ಳುವ ಅರಣ್ಯ ಭೂಮಿಯ ಸ್ವಾಧೀನದ ಕಾರ್ಯ ಯಾವ ಹಂತದಲ್ಲಿದೆ, ಹಾಗೂ ಒಟ್ಟು ಎಷ್ಟು ಅರಣ್ಯ ಭೂಮಿ ಪಡೆಯುವ ಯೋಜನೆ ಇರುವುದು ?

ಈ) ಸಿಂಧನೂರ (ಜವಳಗೇರಾ) ಸೆಂಟ್ರಲ್ ಫಾರ್ಮ್ ಭೂಮಿ ಕೃಷಿ ವಿಶ್ವವಿದ್ಯಾಲಯಕ್ಕೆ ಪಡೆಯುವ ಕಾರ್ಯ ಯಾವ ಹಂತದಲ್ಲಿದೆ ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಅವಶ್ಯವಿರುವ ಭೂಮಿ ೧೨೨೬ ಎಕರೆ ೧೮ ಗುಂಟೆ. ಈಗಾಗಲೇ ೨೦೩ ಎಕರೆ ೧೭ ಗುಂಟೆ ಭೂಮಿಯನ್ನು ಕೃಷಿ ವಿಶ್ವವಿದ್ಯಾಲಯ ಸ್ವಾಧೀನಪಡಿಸಿಕೊಂಡಿದೆ. ಉಳಿದ ೧೦೦೩ ಎಕರೆ ೦೧ ಗುಂಟೆ ಭೂಮಿಯನ್ನು ವಶಪಡಿಸಿಕೊಳ್ಳಲು ಕಂದಾಯ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆಯೆಂದು ಧಾರವಾಡ ಕೃಷಿ ವಿಶ್ವವಿದ್ಯಾಲಯ ತಿಳಿಸಿದೆ.

ಆ) ಹೌದು, ಅಂದಾಜು ರೂ. ೧೪೦.೦೦ ಲಕ್ಷಗಳು ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯ ತಿಳಿಸಿದೆ.

ಇ) ಧಾರವಾಡ ಕೃಷಿ ವಿಶ್ವವಿದ್ಯಾಲಯ ೩೨೮೯ ಎಕರೆ ಅರಣ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಅರಣ್ಯ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆ.

ಈ) ಸಿಂಧನೂರ ಸೆಂಟ್ರಲ್ ಫಾರ್ಮ್ (ಜವಳಗೇರಾ)ದಲ್ಲಿಯ ೫೦೦ ಎಕರೆ ಭೂಮಿಯನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ಪಡೆಯಲು ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.